## 1ನೆ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ

**ಸಿ.ಸಿ ಸಂಖ್ಯೆಃ 1628-2018**

ಪಿರ್ಯಾದಿದಾರರು ಃ ಸರ್ಕಾರದ ಪರವಾಗಿ ಕುಂದಾಪುರ ಪೊಲೀಸ್ ಠಾಣೆ

-ವಿರುದ್ಧ-

ಆರೋಪಿ ಃ ಹರೀಶ್

**ಮುಂದುವರೆದ ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ**

ಪ್ರಶ್ನೆಃ 1. ಅಭಿಯೋಜನೆ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ಹೇಳಿಕೆ ಕೇಳಿದ್ದೀರಾ?
ಉತ್ತರಃ

ಪ್ರಶ್ನೆಃ 2. ಪ್ರಾಸಾ 1: ಹರೀಶ್ ಆರ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 26-10-2017 ರಂದು ತಾನು ಸಿಬ್ಬಂದಿಯಾದ ಚಾ.ಸಾ.8 ರವರೊಂದಿಗೆ ಇಲಾಖಾ ಜೀಪಿನಲ್ಲಿ ವಿಶೇಷ ರಾತ್ರಿ ರೌಂಡ್ಸ್ ಕರ್ತವ್ಯದಲ್ಲಿ ಇದ್ದಾಗ ದಿಃ 27.10.2017ರ ಮುಂಜಾನೆ 4.30 ಗಂಟೆಗೆ ಬಾತ್ಮಿದಾರರು ಕರೆ ಮಾಡಿ ಆನಗಳ್ಳಿ ವಾರಾಹಿ ನದಿಯಿಂದ ಅಕ್ರಮವಾಗಿ ಮರಳು ಸಾಗಾಟ ಮಾಡಿಕೊಂಡು ಮಾರ್ಕೋಡು ಕಡೆಗೆ ಬರುತ್ತಿದ್ದಾರೆ ಎಂದು ತಿಳಿಸಿದ ಮೇರೆಗೆ ತಾನು ಕೂಡಲೇ ಅಲ್ಲಿಗೆ ತೆರಳಿ ಕಳಂಜೆ ಗ್ರಾಮದ ಅಂಗನವಾಡಿ ಬಳಿ ತನ್ನ ಇಲಾಖಾ ಜೀಪನ್ನು ನಿಲ್ಲಿಸಿ ಅಲ್ಲಿ ಮರೆಯಲ್ಲಿ ನಿಂತು ನೋಡುತ್ತಿದ್ದಾಗ ಮುಂಜಾನೆ ಸಮಯ 4.50 ರ ಸುಮಾರಿಗೆ ಕೆದೂರಿನಿಂದ ಒಂದು ವಾಹನ ಬರುತ್ತಿದ್ದು ಅದನ್ನು ನಿಲ್ಲಿಸುವಂತೆ ತಾವು ಅಲ್ಲಿಂದಲೇ ಟಾರ್ಚ್ ಲೈಟ್ ಬಿಟ್ಟು ಸೂಚನೆ ನೀಡಿದಾಗ ವಾಹನವನ್ನು ಚಾಲಕ ನಿಲ್ಲಿಸಿದ್ದು, ನಂತರ ತಾನು ಮತ್ತು ಸಿಬ್ಬಂದಿಯವರಾದ ಚಾ.ಸಾ.8ರವರು ಮುಂದಕ್ಕೆ ನಡೆದುಕೊಂಡು ಹೋದಾಗ ಆತ ಸಮವಸ್ತ್ರದಲ್ಲಿ ಇದ್ದ ತಮ್ಮನ್ನು ನೋಡಿ ಅಲ್ಲಿ ಪಕ್ಕದ ಹಾಡಿಗೆ ಓಡಿ ಹೋಗಿರುತ್ತಾನೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?
ಉತ್ತರಃ

ಪ್ರಶ್ನೆಃ 3. ಪ್ರಾಸಾ 1: ಹರೀಶ್ ಆರ್ ರವರು ಮುಂದುವರೆದು ನಂತರ ವಾಹನ ನೋಡಲಾಗಿ ಕೆಎ-20-ಸಿ-3817 ಗೂಡ್ಸ್ ವಾಹನವಾಗಿದ್ದು, ಅದನ್ನು ಪರಿಶೀಲಿಸಲಾಗಿ ವಾಹನದಲ್ಲಿ ಮರಳು ತುಂಬಿರುವುದು ಕಂಡು ಬಂದಿದ್ದು. ನಂತರ ಚಾ.ಸಾ.8 ರವರಿಗೆ ಇಬ್ಬರು ಸ್ಥಳೀಯರನ್ನು ಪಂಚರನ್ನಾಗಿ ಕರೆ ತರುವಂತೆ ಸೂಚಿಸಿದ್ದು, ಅದರಂತೆ ಚಾ.ಸಾ.3 ಮತ್ತು 4 ರವರು ಕೂಡಲೇ ಸ್ಥಳಕ್ಕೆ ಬಂದಿದ್ದು ಅವರ ಸಮಕ್ಷಮ ಮರಳು ತುಂಬಿದ ವಾಹನವನ್ನು ಬೆಳಿಗ್ಗೆ 5.00 ರಿಂದ 6.00 ಗಂಟೆಯ ಸಮಯದಲ್ಲಿ ಮಹಜರು ಮುಖೇನ ಸ್ವಾಧೀನಪಡಿಸಿಕೊಂಡು 6.15 ಕ್ಕೆ ಠಾಣೆಗೆ ಹಾಜರಾಗಿ ವಿವರವಾದ ವರದಿಯನ್ನು ತಯಾರಿಸಿ 6-30 ಗಂಟೆಗೆ ಠಾಣಾ ಅಪರಾಧ ಕ್ರಮಾಂಕ 270/2017 ರಂತೆ ಪ್ರಕರಣವನ್ನು ದಾಖಲಿಸಿ ಪ್ರ.ವ. ವರದಿ ತಯಾರಿಸಿ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಯವರಿಗೆ ನಿವೇಧಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?
ಉತ್ತರಃ

ಪ್ರಶ್ನೆಃ 4. ಪ್ರಾಸಾ 1: ಹರೀಶ್ ಆರ್ ರವರು ಮುಂದುವರೆದು ಅದೇ ದಿನ ತನಿಖೆಯನ್ನು ಮುಂದುವರೆಸಿ ವಶಕ್ಕೆ ಪಡೆದ ವಾಹನವನ್ನು ಸ್ವತ್ತು ಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇಧಿಸಿಕೊಂಡಿದ್ದು. ನಂತರ ಸದ್ರಿ ಟೆಂಪೋದಲ್ಲಿ ಇದ್ದ ಮರಳಿನ ಬಗ್ಗೆ ವರದಿಯನ್ನು ನೀಡುವರೇ ಹಿರಿಯ ಭೂ ವಿಜ್ಞಾನಿ ಉಡುಪಿ ಜಿಲ್ಲೆ ರವರಿಗೆ ಕೋರಿಕೆ ಪತ್ರ ಸಲ್ಲಿಸಿದ್ದು. ಅದೇ ದಿನ ಆರೋಪಿಯ ಪತ್ತೆ ಬಗ್ಗೆ ಹುಡುಕಾಡಿ ಆರೋಪಿಯ ಪತ್ತೆಯಾಗಿರುವುದಿಲ್ಲ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?
ಉತ್ತರಃ

ಪ್ರಶ್ನೆಃ 5. ಪ್ರಾಸಾ 1: ಹರೀಶ್ ಆರ್ ರವರು ಮುಂದುವರೆದು ದಿಃ 28-10-2017 ರಂದು ಪುನಃ ಆರೋಪಿಯ ಪತ್ತೆಗೆ

ಆನಗಳ್ಳಿ ಮತ್ತು ಕಳಂಜೆ ಭಾಗದಲ್ಲಿ ಬಾತ್ಮಿದಾರರನ್ನು ಸಂಪರ್ಕಿಸಿ ಯಾವುದೇ ಮಾಹಿತಿ ಬಂದರೆ ವರದಿ ಮಾಡುವಂತೆ ಸೂಚಿಸಿರುತ್ತೇನೆ. ದಿಃ 23-11-2017 ರಂದು ಆರೋಪಿಗೆ ನಿರೀಕ್ಷಣಾ ಜಾಮೀನನ್ನು ನೀಡಿದ್ದು 11-30 ಕ್ಕೆ ಆತ ಠಾಣೆಗೆ ಹಾಜರಾಗಿ ಬೆಳಿಗ್ಗೆ 11-30 ರಿಂದ 12.00 ಗಂಟೆಯವರೆಗೆ ಆರೋಪಿಯದಸ್ತಗಿರಿ ಕ್ರಮವನ್ನು ಜರುಗಿಸಿದ್ದು. ನಂತರ ಆರೋಪಿಯ ಸ್ವ ಇಚ್ಚಾ ಹೇಳಿಕೆ ಪಡೆದಿದ್ದು. ಅದರ ಆಧಾರದ ಮೇಲೆ ಆರೋಪಿ ತೋರಿಸಿಕೊಟ್ಟಂತೆ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ಚಾ.ಸಾ.5 ಮತ್ತು 6 ರವರ ಸಮಕ್ಷಮ ಮಧ್ಯಾಹ್ನ 12-50 ರಿಂದ 01-50 ರವರೆಗೆ ಸ್ಥಳ ಪಂಚನಾಮೆ ಜರುಗಿಸಿದ್ದು. ಅದೇ ದಿನ ದಾಳಿಯ ಸಮಯದಲ್ಲಿ ಇದ್ದಂತಹ ಚಾ.ಸಾ.8 ಮತ್ತು ಲೊಕೇಶ್-ಚಾಸಾ-9ರವರ ಹೇಳಿಕೆಯನ್ನು ಪಡೆದು ಕಡತಕ್ಕೆ ಅಳವಡಿಸಿದ್ದು. ಸಾಕ್ಷಿದಾರರಾದ ಚಾಸಾ-2 ರಿಂದ 4ರವರನ್ನು ಠಾಣೆಗೆ ಕರೆಯಿಸಿ ಅವರ ಹೇಳಿಕೆ ಪಡೆದಿರುತ್ತೇನೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆಃ 6. ಪ್ರಾಸಾ 1: ಹರೀಶ್ ಆರ್ ರವರು ಮುಂದುವರೆದು ದಿಃ 29-11-2017 ರಂದು ಆರೋಪಿ ಠಾಣೆಗೆ ಹಾಜರಾಗಿ ಪ್ರಕರಣದಲ್ಲಿ ಮರಳನ್ನು ಲೋಡ್ ಮಾಡಲು ಬಳಸಿದ ಕೇಸರಿ ಬಣ್ಣದ ಫೈಬರ್ ಬುಟ್ಟಿ -1, ತಿಳಿ ನೀಲಿ ಬಣ್ಣದ ಫೈಬರ್ ಬುಟ್ಟಿ -1, ಮರದ ಹಿಡಿ ಇರುವ ಕಬ್ಬಿಣದ ಹಾರೆ-2 ನ್ನು ಹಾಜರುಪಡಿಸಿದ್ದು, ಪಂಚರಾದ ಚಾ.ಸಾ.5 ರವರ ಸಮಕ್ಷಮ ಪಂಚನಾಮೆಯನ್ನು 5.10 ರಿಂದ 5.45 ರವರೆಗೆ ವಶಕ್ಕೆ ಪಡೆದು ಠಾಣಾ ಮಾಲು ಪಟ್ಟಿಯಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ನಿವೇಧಿಸಿಕೊಂಡಿದ್ದು. ಘಟನಾ ಸ್ಥಳದಲ್ಲಿ ಮಹಜರು ಮಾಡುವ ಸಮಯದಲ್ಲಿ ಪೋಟೋವನ್ನು ತೆಗೆದಿರುತ್ತೇವೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆಃ 7. ಪ್ರಾಸಾ 1: ಹರೀಶ್ ಆರ್ ರವರು ಮುಂದುವರೆದು ದಿಃ 23-01-2018 ರಂದು ತನಿಖೆಯನ್ನು ಮುಂದುವರೆಸುತ್ತಾ ನ್ಯಾಯಾಲಯದಿಂದ ಟೆಂಪೋ ಬಿಡುಗಡೆ ಮಾಡುವಂತೆ ಆದೇಶ ನೀಡಿದ್ದು ನಂತರ ಆರೋಪಿಯಿಂದ ಇಂಡಿಮಿನಿಟಿ ಬಾಂಡ್ ಕೊಟ್ಟು ಬಿಟ್ಟು ಕೊಟ್ಟಿದ್ದು. ದಿಃ 12-04-2018 ರಂದು ಚಾಸಾ-7 ರವರಿಂದ ಮರಳಿನ ಬಗ್ಗೆ ವರದಿ ಹಾಗೂ ಮರಳನ್ನು ತೆಗೆದ ಜಾಗದಲ್ಲಿ ಮರಳನ್ನು ತೆಗೆಯಬಾರದು ಎಂದು ಇರುವ ಸರಕಾದ ಆದೇಶವನ್ನು ತಿಳುವಳಿಕೆ ಪತ್ರದಲ್ಲಿ ನಮಗೆ ನೀಡಿದ್ದು ಅದನ್ನು ಕಡತಕ್ಕೆ ಅಳವಡಿಸಿದ್ದು. ಆರೋಪಿತರ ವಿರುದ್ದ ಈ ಹಿಂದೆ ದಾಖಲಾಗಿದ್ದ ಪ್ರ.ವ.ವರದಿಯಲ್ಲಿ ಎಂ ಎಂ ಆರ್ ಡಿಯನ್ನು ಹೊರತುಪಡಿಸಿ ಕಲಂ 379 ಐಪಿಸಿರಡಿಯಲ್ಲಿ ಆರೋಪಿ ವಿರುದ್ದ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆಃ 8. ಪ್ರಾಸಾ 1: ಹರೀಶ್ ಆರ್ ರವರು ಮುಂದುವರೆದು ಸಾಕ್ಷಿಯು ನಿವೇಧನೆ, ದಿಃ 27-10-2017ರ ಸ್ಥಳ ಪಂಚನಾಮೆ, ದಿಃ 23-11-2017ರ ಆರೋಪಿ ದಸ್ತಗಿರಿ ಪಂಚನಾಮೆ, ಆರೋಪಿ ತೋರಿಸಿದ ಕೃತ್ಯ ನಡೆದ ಸ್ಥಳದ ಪಂಚನಾಮೆ, ದಿಃ 29-11-2017ರ ಸ್ವತ್ತು ಸ್ವಾಧೀನತಾ ಪಂಚನಾಮೆಗಳನ್ನು ನಿಪಿ1 ರಿಂದ 4 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ರಿಂದ 4(ಎ) ಎಂದು ಗುರುತಿಸಲಾಯಿತು. ಪ್ರ.ವ.ವರದಿ, ದಿಃ 21-12-2017, ದಿಃ 16-01-2018ರ ಹಿರಿಯ ಭೂ ವಿಜ್ಞಾನಿಗಳ ಕಚೇರಿಯಿಂದ ಪಡೆದ ಪತ್ರಗಳು, ವಾಹನವನ್ನು ಆರೋಪಿಗೆ ಬಿಟ್ಟು ಕೊಟ್ಟ ರಶೀದಿ ಗಳನ್ನು ನಿ.ಪಿ.5 ರಿಂದ 8 ಎಂದು, ಸಾಕ್ಷಿ ಸಹಿಗಳನ್ನು ನಿಪಿ-5(ಎ) ರಿಂದ 8(ಎ) ಎಂದು ಗುರುತಿಸಲಾಯಿತು. ಸ್ಥಳದ 2 ಪೋಟೋ ಹಾಗೂ ವಾಹನದ 1 ಪೋಟೊವನ್ನು ನಿ.ಪಿ.9 ರಿಂದ 11 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 2 ಫೈಬರ್ ಬುಟ್ಟಿ ಮತ್ತು 2 ಮರದ ಹಿಡಿ ಇರುವ ಹಾರೆಗಳನ್ನು ಮುಮಾ1 ರಿಂದ 4 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆಃ 9. ಪ್ರಾಸಾ 6: ಕೋದಂಡರಾಮಯ್ಯ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 27-10-2017 ರಂದು ಚಾಸಾ-1 ರವರು ಮರಳಿನ ಮಾದರಿ ಕಳುಹಿಸಿದ್ದು, ಅದನ್ನು ಪರಿಶೀಲಿಸಿ ಸಾಮಾನ್ಯ ಮರಳು ಎಂದು ದೃಡೀಕರಣ ಪತ್ರಗಳನ್ನು ವಿತರಿಸಿರುತ್ತೇನೆ. ಸಾಕ್ಷಿ ಸದ್ರಿ ದೃಡೀಕರಣ ಪತ್ರಗಳನ್ನು ನಿ.ಪಿ.6 ಮತ್ತು 7 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಮತ್ತು ನಿಪಿ-7(ಬಿ) ಎಂದು ಗುರುತಿಸಲಾಯಿತು ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆಃ 10. ಪ್ರಾಸಾ 7: ಲೊಕೇಶ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 26-10-2017 ರಂದು ಚಾಸಾ1 ರವರೊಂದಿಗೆ ಸಿಬ್ಬಂದಿಯಾದ ಚಾಸಾ-8ರವರೊಂದಿಗೆ ತಾನು ಇಲಾಖಾ ಜೀಪಿನ ಚಾಲಕನಾಗಿ ವಿಶೇಷ ರಾತ್ರಿ ರೌಂಡ್ಸ್ ಕರ್ತವ್ಯದಲ್ಲಿ ಇದ್ದಾಗ ದಿಃ 27-10-2017ರ ಮುಂಜಾನೆ 4-30 ಗಂಟೆಗೆ ಬಾತ್ಮಿದಾರರು ಕರೆ ಮಾಡಿ ಆನಗಳ್ಳಿ ವಾರಾಹಿ ನದಿಯಿಂದ ಅಕ್ರಮವಾಗಿ ಮರಳು ಸಾಗಾಟ ಮಾಡಿಕೊಂಡು ಮಾರ್ಕೋಡು ಕಡೆಗೆ ಬರುತ್ತಿದ್ದಾರೆ ಎಂದು ತಿಳಿಸಿದ ಮೇರೆಗೆ ಚಾಸಾ-1ರವರು ಕೂಡಲೇ ಅಲ್ಲಿಗೆ ತೆರಳಿ ಕಳಂಜೆ ಗ್ರಾಮದ ಅಂಗನವಾಡಿ ಬಳಿ ಇಲಾಖಾ ಜೀಪನ್ನು ನಿಲ್ಲಿಸಿ ಅಲ್ಲಿ ಮರೆಯಲ್ಲಿ ನಿಂತು ನೋಡುತ್ತಿದ್ದಾಗ ಮುಂಜಾನೆ ಸಮಯ 4-50ರ ಸುಮಾರಿಗೆ ಕೆದೂರಿನಿಂದ ಒಂದು ವಾಹನ ಬರುತ್ತಿದ್ದು ಅದನ್ನು ನಿಲ್ಲಿಸುವಂತೆ ನಾವು ಅಲ್ಲಿಂದಲೇ ಟಾರ್ಚ್ ಲೈಟ್ ಬಿಟ್ಟು ಸೂಚನೆ ನೀಡಿದಾಗ ವಾಹನವನ್ನು ನಿಲ್ಲಿಸಿದ್ದು, ಚಾಲಕರು ಓಡಿ ಹೋಗಿರುತ್ತಾರೆ. ನಂತರ ಚಾಸಾ-1 ಮತ್ತು ಸಿಬ್ಬಂದಿಯವರಾದ ಚಾಸಾ-8ರವರು ಮುಂದಕ್ಕೆ ನಡೆದುಕೊಂಡು ಹೋದಾಗ ಆತ ಸಮವಸ್ತ್ರದಲ್ಲಿ ಇದ್ದ ತಮ್ಮನ್ನು ನೋಡಿ ಅಲ್ಲಿ ಪಕ್ಕದ ಹಾಡಿಗೆ ಓಡಿ ಹೋಗಿದ್ದು. ಆತ ಹರೀಶ್ ಆನಗಳ್ಳಿ ಎಂದು ಚಾಸಾ-1ರವರು ತಿಳಿಸಿರುತ್ತಾರೆ. ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆಃ 11. ಪ್ರಾಸಾ 7: ಲೊಕೇಶ್ ರವರು ಮುಂದುವರೆದು ನಂತರ ವಾಹನ ನೋಡಲಾಗಿ ಕೆಎ-20-ಸಿ-3817 ಗೂಡ್ಸ್ 407 ವಾಹನವಾಗಿದ್ದು, ಅದನ್ನು ಪರಿಶೀಲಿಸಲಾಗಿ ವಾಹನದಲ್ಲಿ ಮರಳು ತುಂಬಿರುವುದು ಕಂಡು ಬಂದಿದ್ದು. ನಂತರ ಚಾಸಾ-8 ರವರಿಗೆ ಇಬ್ಬರು ಸ್ಥಳೀಯರನ್ನು ಪಂಚರನ್ನಾಗಿ ಕರೆ ತರುವಂತೆ ಸೂಚಿಸಿದ್ದು, ಅದರಂತೆ ಚಾ.ಸಾ.3 ಮತ್ತು 4ರವರು ಕೂಡಲೇ ಸ್ಥಳಕ್ಕೆ ಬಂದಿದ್ದು ಅವರ ಸಮಕ್ಷಮ ಮರಳು ತುಂಬಿದ ವಾಹನವನ್ನು ಬೆಳಿಗ್ಗೆ 5.00 ರಿಂದ 6.00 ಗಂಟೆಯ ಸಮಯದಲ್ಲಿ ಮಹಜರು ಮುಖೇನ ಸ್ವಾಧೀನಪಡಿಸಿಕೊಂಡು ಪಂಚನಾಮೆಗೆ ತನ್ನ ಸಹಿ ಪಡೆದಿದ್ದು. ಈ ಬಗ್ಗೆ ತನಿಖಾಧಿಕಾರಿಯವರಿಗೆ ತನ್ನ ಹೇಳಿಕೆ ನೀಡಿರುತ್ತೇನೆ. ನಿಪಿ-1ರಲ್ಲಿ ತನ್ನ ಸಹಿಯನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-11ರಲ್ಲಿ ಕಂಡು ಬರುವ ವಾಹನವನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆಃ 12. ನಿಮಗೆ ಹೆಚ್ಚಿಗೆ ಹೇಳುವುದು ಏನಾದರೂ ಇದೆಯಾ?

ಉತ್ತರಃ

ಪ್ರಶ್ನೆಃ 13: ನಿಮ್ಮ ಪರವಾಗಿ ಸಾಕ್ಷಿಗಳಿದ್ದಾರ?

ಉತ್ತರಃ

ಮೇಲ್ಕಂಡ ಹೇಳಿಕೆಯನ್ನು ಆರೋಪಿ ನುಡಿದ ಶಬ್ದಗಳಲ್ಲಿಯೇ ದಾಖಲಿಸಿದ್ದು ಅದು ನಿಜ ಹಾಗೂ ಸತ್ಯಾಂಶಗಳಿಂದ ಕೂಡಿರುವುದಾಗಿ ಪ್ರಮಾಣೀಕರಿಸಿದೆ.

ಇಂದು ದಿನಾಂಕ 16 ನೇ ಡಿಸೆಂಬರ್ 2025.

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.